# ಚೆಂದುಳ್ಳಿ ಚೆಲುವೆ ಅಶೋಕ



ಆಯುರ್ವೇದದಲ್ಲಿ ಮಹತ್ವದ ಸ್ಥಾನ ಪಡೆದಿರುವ 'ಅಶೋಕ' ಸಸ್ಯ ಸಂಜೀವಿನಿ. ಹಲವು ಕಾಯಿಲೆಗಳಿಗೆ ರಾಮಬಾಣವಾಗಿರುವ ಈ ಗಿಡದ ಎಲೆ, ಕಾಂಡ, ಹೂವು, ಬೇರುಗಳೆಲ್ಲವೂ ಉತ್ತಮ ಔಷಧೀಯ ಗುಣಗಳನ್ನು ಹೊಂದಿವೆ. ಸದ್ಯ ಅಳಿವಿನಂಚಿನಲ್ಲಿರುವ ಈ ಗಿಡವನ್ನು ಸಂರಕ್ಷಣೆ ಮಾಡಬೇಕಾಗಿದೆ.



■ ಸುಮನಾ ಜಿ. ಪ್ರಸಾದ್

ಗಿಡದ ತುಂಬ ಕೇಸರಿ– ಹಳದಿ ಮಿಶ್ರಿತ ಅರಳುವ ಮೊಗ್ಗು–ಹೂವುಗಳನ್ನು ನೋಡಿದಾಗ ಎಂತಹ ಸಹೃದಯರ ಮನವೂ ಅರಳುತ್ತದೆ, ಸೃಷ್ಟಿಯ ಸೊಬಗಿಗೆ ಅಚ್ಚರಿಯೂ ಆಗದಿರದು. ಈ ಚೆಂದುಳ್ಳಿ ಚೆಲುವೆ 'ಅಶೋಕ' ಎಂಬ ಹೂವಿನದ್ದು. ಕರಾವಳಿ ಹಾಗೂ ಪಶ್ಚಿಮ ಘಟ್ಟಗಳಲ್ಲಿ ಈ ಹೂವಿನ ಗಿಡ ಕಾಣಬಹುದು. ಭಾರತ, ನೇಪಾಳ. ಶ್ರೀಲಂಕಾಗಳಲ್ಲಿ ಈ ಗಿಡ ಹೆಚ್ಚಾಗಿ ಬೆಳೆಯುತ್ತದೆ.

ಸದಾ ಹಚ್ಚ ಹಸುರಿನಿಂದ ಕೂಡಿರುವ ಮರದ ಎಲೆಗಳು, ಚೆಂಡು ಚೆಂಡಾಗಿರುವ ಹೂವು, ಸದಾ ಲವಲವಿಕೆಯನ್ನೇ ಕಾಣುವ ಗಿಡ–ಹೂವುಗಳು ನೋಡಲು ಚಂದ. ಈ ವೃಕ್ಷ ಸಾಮಾನ್ಯವಾಗಿ ಫೆಬ್ರುವರಿಯಿಂದ ಏಪ್ರಿಲ್‌ವರೆಗೆ ಹೂಗಳನ್ನು ಬಿಡುತ್ತದೆ.

ಅಶೋಕ ಹೂವಿಗೆ ಸೀತಾ ಅಶೋಕ, ಅಶೋಪಲವ, ಅಸುಪಲ, ಹೇಮಪುಷ್ಪ, ಮಧುರಪುಷ್ಪ ಮುಂತಾದ ಹೆಸರುಗಳಿವೆ. ಮಲಯಾಳಂನಲ್ಲಿ ಅಸೋಕಂ, ತೆಲುಗಿನಲ್ಲಿ ವಂಜುಲಮು ಮುಂತಾದ ಹೆಸರುಗಳಲ್ಲಿ ಕರೆಯಲ್ಪಡುತ್ತದೆ. ಸದಾ ಹಸುರಿನಿಂದ ಕೂಡಿದ ಈ ಮರ ಸುಮಾರು 15–20 ಮೀಟರ್ ಎತ್ತರ ಬೆಳೆಯುತ್ತದೆ. ಅಂದಾಜು 15 ಸೆಮೀ ಉದ್ದದ ಎಲೆಗಳಿರುತ್ತವೆ.

ಅಶೋಕ ವೃಕ್ಷದಲ್ಲಿ ಎರಡು ವಿಧ. ಒಂದು ವಿಧದ ಮರ ಎತ್ತರವಾಗಿ ಬೆಳೆಯದೆ ಟೊಂಗೆಗಳು ಅಗಲವಾಗಿ ಹಬ್ಬಿರುತ್ತದೆ. ಈ ವಿಧದ ಮರದಲ್ಲಿ ಬಿಡುವ ಹೂವುಗಳ ಸಂಖ್ಯೆ ಹೆಚ್ಚು ಅಲ್ಲದೆ ಸುವಾಸನೆಯಿಂದಲೂ ಕೂಡಿರುತ್ತದೆ. ಮತ್ತೊಂದು ವಿಧದಲ್ಲಿ ಮರ ಎತ್ತರವಾಗಿ ಬೆಳೆಯುತ್ತದೆ ಹೂವುಗಳ ಸಂಖ್ಯೆ ಬಹಳ ಕಡಿಮೆ.

## ಔಷಧೀಯ ಗುಣಗಳ ಅಶೋಕ

ಆಯುರ್ವೇದದಲ್ಲಿ ಅಶೋಕದ ಬಳಕೆ ಹೆಚ್ಚು. ಆಯುರ್ವೇದ ಔಷಧಾಲಯಗಳಲ್ಲಿ 'ಅಶೋಕಾರಿಷ್ಟ' ಎಂಬ ಔಷಧಿ ಸಿಗುತ್ತದೆ. ಇದು ಕೆಲವೊಂದು ಸ್ತ್ರೀರೋಗಗಳಿಗೆ ತುಂಬ ಉಪಯುಕ್ತ. ತಿಂಗಳ ಕೆಲ ದಿನಗಳಲ್ಲಿ ಮಹಿಳೆಯರಿಗೆ ಅತಿಯಾದ ರಕ್ತಸ್ರಾವವಾಗುತ್ತಿದ್ದರೆ ಈ ಅಶೋಕಾರಿಷ್ಟ ಅತ್ಯಂತ ಸೂಕ್ತವಾದ ಔಷಧಿ. ವೈದ್ಯರ ಸಲಹೆ ಮೇರೆಗೆ ಔಷಧಿ ಸೇವಿಸುವ ಪ್ರಮಾಣವನ್ನು ತಿಳಿದುಕೊಳ್ಳಬಹುದು.

ಅತಿಯಾಗಿ ತಲೆನೋವು ಬಂದರೆ ಅಶೋಕ ಹೂವಿನಿಂದ ತಯಾರಿಸಿದ ಮದ್ದು ಸಹಕಾರಿ. ಬ್ಯಾಕ್ಟೀರಿಯಾ ಮತ್ತು ಫಂಗಸ್ ಸೋಂಕು ಉಂಟಾಗಿದ್ದಲ್ಲಿ ಈ ಮರದಿಂದ ತಯಾರಿಸಿದ ಔಷಧಿ ಬಳಸಬಹುದು. ಹೊಟ್ಟೆನೋವು, ಹೊಟ್ಟೆ ಹುಳಕ್ಕೂ ಇದರ ಔಷಧಿ ಉಪಯುಕ್ತ. ಚರ್ಮದ ಉರಿ ಇದ್ದರೆ ಅಶೋಕ ಗಿಡದಿಂದ ತಯಾರಿಸಿದ ಮುಲಾಮು ಬಳಸಬಹುದು.ರಕ್ತ ಶುದ್ಧೀಕರಣಕ್ಕೆ ಇದರ ಎಲೆಯಿಂದ ತಯಾರಿಸಿದ ಔಷಧಿ ರಾಮಬಾಣ. ಅಶೋಕ ಬೀಜದಿಂದ ತಯಾರಿಸಿದ ಪುಡಿ ಕಿಡ್ನಿ ಕಲ್ಲುಗಳನ್ನು ಕರಗಿಸಬಲ್ಲದು ಎನ್ನುವುದು ಆಯುರ್ವೇದ ತಜ್ಞರ ಅಭಿಮತ.

## ಪೌರಾಣಿಕ ಹಿನ್ನೆಲೆ

ಅಶೋಕ ಮರಕ್ಕೆ ಪೌರಾಣಿಕ ಹಿನ್ನೆಲೆಯೂ ಇದೆ. ಈ ವೃಕ್ಷಕ್ಕೆ ಜನಮನದಲ್ಲಿ ಪಾವಿತ್ರ್ಯದ ಭಾವನೆಯಿದೆ. ಇದು ಧಾರ್ಮಿಕ ಕಾರ್ಯಕ್ರಮಗಳಲ್ಲಿ ವಿಶೇಷವಾಗಿ ಬಳಸಲಾಗುತ್ತದೆ. ರಾಮಾಯಣದಲ್ಲೂ ಈ ಹೂವಿನ ಬಗ್ಗೆ ಉಲ್ಲೇಖವನ್ನು ಕಾಣಬಹುದು. ಒಂದು ನಂಬಿಕೆ ಪ್ರಕಾರ ಹನುಮಂತ ಮೊದಲ ಬಾರಿಗೆ ಸೀತೆಯನ್ನು ಭೇಟಿ ಮಾಡಿದ್ದು ಅಶೋಕ ಮರದ ಕೆಳಗೆ ಎಂಬ ಊಹೆಯೂ ಇದೆ.

ಭಾರತದಲ್ಲಿ ಅಶೋಕ ಹೂವು ಬಹಳ ಪಾವಿತ್ರ್ಯದಿಂದ ಕೂಡಿದ್ದು ಎಂಬ ನಂಬಿಕೆ ಇದೆ. ನೇಪಾಳ ಮತ್ತು ಶ್ರೀಲಂಕಾದ ಜನರಲ್ಲೂ ಇದೇ ಭಾವನೆಯಿದೆ. ಹೀಗಾಗಿ ಸಾಮಾನ್ಯವಾಗಿ ದೇವಸ್ಥಾನಗಳ ಪಕ್ಕ ಈ ಗಿಡವನ್ನು ನೆಡುತ್ತಾರೆ.

ಅಶೋಕ ಅತ್ಯಂತ ಹೆಚ್ಚು ಔಷಧೀಯ ಗುಣಗಳನ್ನು ಉಳ್ಳ ಸಸ್ಯಸಂಜೀವಿನಿ. ಸದ್ಯ ಅಳಿವಿನಂಚಿನಲ್ಲಿರುವ ಈ ಗಿಡವನ್ನು ಹೆಚ್ಚು ಹೆಚ್ಚು ಬೆಳೆಸಿ ಸಂರಕ್ಷಿಸಬೇಕಾಗಿದೆ. ■